ಶ್ರೀ ರಮಾನಾಥ ರೈ.—ಇದು ಪೂರಕ ಪ್ರಶ್ನೆಯಲ್ಲ, ಬೇರೆ ಪ್ರಶ್ನೆ.

ಅಧ್ಯಕ್ಷರು.—ಸೆಕೆಂಡ್ ಲಿಸ್ಟ್ ಆಮೇಲೆ ಕರೆಯುತ್ತೇನೆ ಎಂದು ಹೇಳಿದೆ. ತಾವು ಈಗ ಓದಿ.

೯) ಪೋಲೀಸ್ ಇಲಾಖೆಯಲ್ಲಿ ಸಬ್ ಇನ್ಸ್‌ಪೆಕ್ಟರ್ ಹುದ್ದೆಗೆ ೧೯೮೪ರ ಹಿಂದೆ ಪರೀಕ್ಷೆಗಳನ್ನು ನಡೆಸಿದ್ದರೂ ನೇಮಕಾತಿ ಮಾಡದೇ ಇರುವುದು.

೪-೩೦ ಪಿ. ಎಂ.

ಶ್ರೀ ರಮಾನಾಥ ರೈ.—ಮಾನ್ಯ ಅಧ್ಯಕ್ಷರೆ, ಕರ್ನಾಟಕ ಪೋಲೀಸ್ ಇಲಾಖೆಯಲ್ಲಿ ಸಬ್‌ಇನ್ಸ್‌ಪೆಕ್ಟರ್ ಹುದ್ದೆಗೆ ಲಿಖಿತ ಪರೀಕ್ಷೆ ಮೌಖಿಕ ಪರೀಕ್ಷೆ ದೇಹದಾರ್ಢ್ಯದ ಪರೀಕ್ಷೆಗಳನ್ನು ಅಭ್ಯರ್ಥಿಗಳಿಗೆ ೧೯೮೪ರಷ್ಟು ಹಿಂದೆಯೇ ನಡೆಸಿದ್ದರೂ ಇನ್ನೂ ನೇಮಕಾತಿ ಆಗಿರುವುದಿಲ್ಲ. ಇದರಿಂದ ಅಭ್ಯರ್ಥಿಗಳಿಗೆ ತುಂಬಾ ಅನ್ಯಾಯವಾಗಿದೆ. ಈಗ ಈ ಅಭ್ಯರ್ಥಿಗಳ ವಯೋಮಿತಿ ಮೀರುವ ಸಂಭವ ಇರುವುದರಿಂದ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ ಲಕ್ಷ್ಮೀಸಾಗರ್ (ಮುಖ್ಯ ಮಂತ್ರಿಗಳ ಪರವಾಗಿ).—ಅಧ್ಯಕ್ಷರೆ, ಡೈರೆಕ್ಟರ್ ಜನರಲ್ ಮತ್ತು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಅವರು ದಿನಾಂಕ ೫-೪-೧೯೮೪ರಂದು ಹೊರಡಿಸಿದ ಅಧಿಸೂಚನೆಯಲ್ಲಿ ೫೦ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಹುದ್ದೆಗಳಿಗೆ ಅರ್ಜಿಗಳನ್ನು ಕರೆದರು. ನಂತರ ಡೈರೆಕ್ಟರ್ ಜನರಲ್ ಮತ್ತು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಅವರು ಕೋರಿದಂತೆ ಈ ಹುದ್ದೆಗಳನ್ನು ೭೫ಕ್ಕೆ ಹೆಚ್ಚಿಸಲು ದಿನಾಂಕ ೨೦-೬-೮೪ ರಂದು ಅನುಮತಿ ನೀಡಲಾಯಿತು.

ಇಲಾಖಾ ನೇಮಕಾತಿ ಸಮಿತಿಯು ಅರ್ಜಿಗಳನ್ನು ಸಲ್ಲಿಸಿದ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆಯನ್ನು ೧೯೮೪ರ ಅಕ್ಟೋಬರ್ ತಿಂಗಳಿನಲ್ಲಿ ನಡೆಸಿ, ಈ ಪರೀಕ್ಷೆಯಲ್ಲಿ ಉತ್ತೀರ್ಣರಾದವರ ಪಟ್ಟಿಯನ್ನು ೧೯೮೫ರ ಮಾರ್ಚ್ ತಿಂಗಳಿನಲ್ಲಿ ಪ್ರಕಟಿಸಿತು. ದೈಹಿಕ ಸಾಮರ್ಥ್ಯ ಪರೀಕ್ಷೆ ವಾಕ್ ಪರೀಕ್ಷೆಗಳನ್ನು ಮುಂಗಿಸಲಾಗಿದ್ದು, ಇನ್ನು ಮೌಖಿಕ ಪರೀಕ್ಷೆಯನ್ನು ಮಾತ್ರ ನಡೆಸಬೇಕಾಗಿದೆ, ಇದನ್ನು ಆದಷ್ಟು ಜಾಗ್ರತೆಯಾಗಿ ನಡೆಸಲಾಗುವುದು.

೧೦) ಸಂಕೇಶ್ವರ ಮತ ಕ್ಷೇತ್ರದಲ್ಲಿ ಪರಿಶಿಷ್ಟ ವರ್ಗಗಳಿಗೆ ಮಂಜೂರಾದ ಸಂಪರ್ಕ ದಾರಿಗಳನ್ನು ಪೂರ್ತಿ ಮಾಡುವಲ್ಲಿ ವಿಳಂಬವಾಗಿರುವುದು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಸಂಕೇಶ್ವರ ಮತಕ್ಷೇತ್ರದ ಪರಿಶಿಷ್ಟ ವರ್ಗದ ಬಡಾವಣೆಗಳಿಗೆ ಮಂಜೂರಾಗಿರುವ ಸಂಪರ್ಕ ದಾರಿಗಳ ಕೆಲಸವನ್ನು ಪ್ಲಾನ್ ಎಸ್ಟಿಮೇಟಿನಂತೆ ಪೂರ್ತಿ ಮಾಡುವುದರಲ್ಲಿ ವಿಳಂಬವಾಗಿದ್ದು ಇನ್ನೂ ಅರ್ಧಕ್ಕಿಂತ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗಿದೆ. ಇದೇರೀತಿ ಕವಣೆವಾಡಿ ಗ್ರಾಮಕ್ಕೆ ಸಂಪರ್ಕ ರಸ್ತೆಯನ್ನು ಅರ್ಧಕ್ಕೆ ತಯಾರಿಸಿದ್ದು ಪೂರ್ತಿ ಮಾಡಿಸುವುದರಲ್ಲಿ ವಿಳಂಬವಾಗುತ್ತಿದೆ. ಬೈರಾಪುರ ಗ್ರಾಮದ ಸಮೀಪದ ಸೇತುವೆ ನಿರ್ಮಾಣ ಕೂಡ ಸ್ಥಗಿತಗೊಂಡಿದೆ. ಆಯವ್ಯಯದಲ್ಲಿ ಬಂದಿರುವ ಯಾದಗೂಡ್ ಅಮೃಣಿಗಿ ನಿಡಶೋಸಿ ಸಂಪರ್ಕ ರಸ್ತೆಯನ್ನು ಡಾಂಬರೀಕರಣ ಮಾಡುವುದರಲ್ಲಿ ವಿಳಂಬವಾಗುತ್ತಿದ್ದು ಮಳೆಗಾಲ ಬರುತ್ತಿದ್ದು ಕೆಲಸ ಪೂರ್ತಿಯಾಗದಿರುವ ಬಗ್ಗೆ ನಾವು ವಿಷಾದವನ್ನು ವ್ಯಕ್ತಪಡಿಸಬೇಕಾಗುತ್ತದೆ. ಈ ಎಲ್ಲಾ ಕೆಲಸಗಳನ್ನು ಈ ವರ್ಷದ ಮಳೆಗಾಲದ ಪ್ರಾರಂಭಕ್ಕಿಂತ ಮುಂಚಿತವಾಗಿ ಪೂರ್ಣ ಮಾಡುವುದಾಗಿ ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗದವರು ಹಾಗೂ ಜಿಲ್ಲಾ ಪರಿಷತ್‌ನವರು ಕೊಟ್ಟಿರುವ ಆಶ್ವಾಸನೆ ವಿಫಲವಾಗಿದೆ. ಕಾರಣ ಇದಕ್ಕೆ ಸಂಬಂಧಪಟ್ಟ ಜಿಲ್ಲಾ ಪರಿಷತ್ ಅಧಿಕಾರಿಗಳಿಗೆ ಸೂಚನೆ ಇಟ್ಟು ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯನ್ನು ನಿವಾರಿಸುವಂತೆ ಸದನದಲ್ಲಿ ಒತ್ತಾಯಿಸುತ್ತೇನೆ ಹಾಗೂ ಈ ಬಗ್ಗೆ ಗ್ರಾಮೀಣಾಭಿವೃದ್ಧಿ ಮಂತ್ರಿಗಳಿಂದ ಹೇಳಿಕೆ ಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಜಿಲ್ಲಾ ಪರಿಷತ್ತಿನವರಿಗೆ ಮಾನ್ಯ ಸದಸ್ಯರು ಹೇಳಿದ್ದರೂ ಸಹ ಏನೂ ಕೆಲಸ ಆಗಲಿಲ್ಲ ಎನ್ನುವ ವಿಚಾರವನ್ನು ಮಾನ್ಯ ಸದಸ್ಯರೆ ಹೇಳಿದ್ದಾರೆ.